ವಿವಿಧ ಬ್ಯಾಂಕುಗಳಲ್ಲಿ ಡಿಪಾಸಿಟ್ ಮಾಡಲಾಗಿದೆ.

ಆ) ಸ್ತ್ರೀಶಕ್ತಿ ಯೋಜನೆಯಡಿ ಗುಂಪುಗಳನ್ನು ರಚಿಸಲಾಗಿದ್ದು, ಅವುಗಳು ಬಲವರ್ಧನೆಯ ಹಂತದಲ್ಲಿವೆ, ಮುಂದೆ ಬ್ಯಾಂಕುಗಳಿಂದ ಸಾಲ ಸೌಲಭ್ಯವನ್ನು ನೀಡುವ ವ್ಯವಸ್ಥೆ ಮಾಡಲಾಗುವುದು.

ಕುಶಾಲನಗರ ಕೃಷಿ ಮಾರುಕಟ್ಟೆಯಲ್ಲಿ ಪ್ರಥಮ ದರ್ಜೆ ಸಹಾಯಕರ ವರ್ಗಾವಣೆ.

2015(2652)

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ(ಸೋಮವಾರ ಪೇಟೆ); ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಕೃಷಿ ಮಾರುಕಟ್ಟೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿರುವ ಶ್ರೀಮತಿ ಚಂದ್ರಾವತಿಯವರನ್ನು 6 ತಿಂಗಳಲ್ಲೇ ವರ್ಗ ಮಾಡಲು ಕಾರಣವೇನು? ಇದು ಸರ್ಕಾರ ವರ್ಗಾವಣೆ ನೀತಿಯನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೇ; ಈ ವರ್ಗಾವಣೆಗೆ ಮುಖ್ಯಮಂತ್ರಿಯವರ ಅನುಮೋದನೆ ಇದೆಯೇ? (ವಿವರ ಕೊಡುವುದು)

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ) ಶ್ರೀಮತಿ ಚಂದ್ರಾವತಿ, ಪ್ರಥಮ ದರ್ಜೆ ಸಹಾಯಕರು, ಇವರನ್ನು ಕುಶಾಲನಗರ ಸಮಿತಿಯಿಂದ ಮಡಿಕೇರಿ ಸಮಿತಿಗೆ ಆಡಳಿತದ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲಾಗಿರುತ್ತದೆ. ವರ್ಗಾವಣೆಯ ನೀತಿಯನ್ನು ಉಲ್ಲಂಘನೆ ಮಾಡಿರುವುದಿಲ್ಲ. ಸದರಿ ಪ್ರಸ್ತಾವನೆಗೆ ಮಾನ್ಯ ಮುಖ್ಯಮಂತ್ರಿಗಳು ಅನುಮೋದನೆ ನೀಡಿರುತ್ತಾರೆ.

ಕೃಷಿ ಕ್ಷೇತ್ರದ ಮೇಲೆ ಡಬ್ಲು.ಟಿ.ಓ.(W.T.O.) ಒಪ್ಪಂದದ ಪರಿಣಾಮ.

2016(2669)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಬ್ಲ್ಯುಟಿಒ ಒಪ್ಪಂದದಿಂದ ಕೃಷಿ ಕ್ಷೇತ್ರದ ಮೇಲೆ ಆಗುವ ಪರಿಣಾಮಗಳನ್ನು ಅಧ್ಯಯನ ನಡೆಸಲು ಸರ್ಕಾರವು ಸಮಿತಿಯನ್ನು ನೇಮಿಸಿತ್ತೆ?

ಆ) ಅಧ್ಯಯನ ಸಮಿತಿ ವರದಿ ನೀಡಿದ್ದಲ್ಲಿ ವರದಿಯ ಬಗ್ಗೆ ಸರ್ಕಾರದ ನಿಲುವೇನು?

ಇ) ರೈತರ ಹಿತರಕ್ಷಣೆ ಮಾಡುವಲ್ಲಿನ ಮಾರ್ಗೋಪಾಯಗಳ ಬಗೆಗೆ ಸರ್ಕಾರವು ಏನಾದರೂ ಚಿಂತನೆ ನಡೆಸಿದೆಯೆ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು.

ಆ) ಈ ವರದಿಯ ಬಗ್ಗೆ ಸರ್ಕಾರವು ಸಕಾರಾತ್ಮಕ ನಿಲುವು ತಳೆದಿದೆ ಹಾಗೂ ಇದನ್ನು ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ.

ಇ) ಹೌದು.

ರಾಜ್ಯದಲ್ಲಿ ಕೃಷಿ ಬೆಲೆ ಆಯೋಗದ ಕಾರ್ಯಕ್ರಮಗಳು.

2017(2671)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಬೆಲೆ ಆಯೋಗ ಅಸ್ತಿತ್ವದಲ್ಲಿದೆಯೇ?

ಆ) ಹಾಗಿದ್ದಲ್ಲಿ ಇದು ಕಾರ್ಯೋನ್ಮುಖವಾಗಿದೆಯೇ?

ಇ) ಸರ್ಕಾರವು ಇದಕ್ಕೇನಾದರೂ ಮಾರ್ಗದರ್ಶಿ ಸೂಚಿಯನ್ನು ನೀಡಿದೆಯೇ?

ಈ) ಹಾಗಿದ್ದಲ್ಲಿ ಇದರ ವಿವರಗಳೇನು?

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ) ಇದೆ.

ಆ) ಆಗಿದೆ.